**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 5741/2023 ಸಿ.ಡಬ್ಲ್ಯೂ-1 ಪಿ.ಡಬ್ಲ್ಯೂ-1

| | | |
|---|---|---|
| ಹೆಸರು | ಃ | ತಿರುಮಲೇಶ |
| ತಂದೇಃಗಂಡ | ಃ | ನರಸಿಂಹ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | : | ಪಿ.ಎಸ್.ಐ ವಾಡಿ |
| ವಾಸಸ್ಥಳ | ಃ | ವಾಡಿ |

ದಿನಾಂಕಃ 31.10.2025
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ:ಸ:ಅ ಅವರಿಂದಃ**

ನಾನು ದಿಃ 20-01-2022 ರಿಂದ ದಿಃ 30-07-2023 ಇಲ್ಲಿಯವರೆಗೆ ಆಳಂದ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ.

ದಿಃ 07-06-2023 ರಂದು ನಾನು ಠಾಣೆಯಲ್ಲಿ ಇದ್ದಾಗ ಸಾ. 5.00 ಗಂಟೆಗೆ ಚಿಚೊಂಳಿ-ಬಿ ಗ್ರಾಮದ ಹರಿಜನ ವಾಡದ ನಿರುಗುಡಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಒಬ್ಬ ವ್ಯಕ್ತಿ ಮನೆಯ ಮುಂದೆ ಸರ್ಕಾರದ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಮಧ್ಯವನ್ನು ಸಂಗ್ರಹಿಸಿಟ್ಟುಕೊಂಡು ಮಧ್ಯವನ್ನು ಮಾರಾಟ ಮಾಡುತ್ತಿದ್ದಾರೆ ಅಂತಾ ಖಚಿತ ಬಾತ್ಮಿ ಬಂದಿದ್ದು, ನಾನು ಇಬ್ಬರು ಪಂಚರಾದ ಚಾಸಾ 2 ಮತ್ತು 3 ರವರನ್ನು ಠಾಣೆಗೆ ಕರೆಯಿಸಿ ಅವರಿಗೆ ವಿಷಯ ತಿಳಿಸಿ ಅವರು ಒಪ್ಪಿ ಕೊಂಡ ನಂತರ ನಮ್ಮ ಇಬ್ಬರು ಸಿಬ್ಬಂದಿಯಾದ ಚಾಸಾ 4 ಮತ್ತು 5 ಮತ್ತು ಪಂಚರು 5.30 ಗಂಟೆಗೆ ಠಾಣೆಗೆಯಿಂದ ಹೊರಟು 6.00 ಗಂಟೆಗೆ ಚಿಚೋಳಿ-ಬಿ ಗ್ರಾಮದ ಹರಿಜನ ವಾಡಕ್ಕೆ ಹೋಗಿ ನಮ್ಮ ವಾಹನವನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ನಾವೆಲ್ಲರೂ ಹರಿಜನ ವಾಡಕ್ಕೆ ಹೋಗಿ ನೋಡಿದಾಗ ಒಬ್ಬ ವ್ಯಕ್ತಿಯ ಘತ್ರ ಶೆಡ್ಡ ಕೆಳಗಡೆ ಮಧ್ಯ ಮಾರಾಟ ಮಾಡುವುದನ್ನು ಖಚಿಪ ಪಡಿಸಿಕೊಂಡು ಸಿಬ್ಬಂದಿ ಮತ್ತು ಪಂಚರ ಸಮಕ್ಷಮ ದಾಳಿ ಮಾಡಿ ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಣೆ ಮಾಡಲಾಗಿ ಅವನ ಹೆಸರು

ಅಂಬರಾಯ ತಂದೆ ವಿಠ್ಠಲ ಶಿಂಘೆ ಅಂತಾ ತಿಳಿಸಿದ್ದು ಅವನ ಬಳಿ ಇದ್ದ ಮಧ್ಯ 90 ಎಮ ಎಲ್ ಓರಿಜನ ಚಾಯಿಸ್ 96 ಪಾಕೆಟಗಳು ಮತ್ತು  ಮಧ್ಯ ಮಾರಾಟದಿಂದ ಬಂದ ರೂ. 240/- ನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಹಾಕಿ ಜಪ್ತಿ ಪಡಿಸಿಕೊಂಡಿರುತ್ತೇವೆ. ಪಂಚನಾಮೆಯನ್ನು 6.15 ರಿಂದ 7.15 ರವರೆಗೆ ಮಾಡಿ ಪಂಚರು ಮತ್ತು ನಾನು ಸಹಿ ಮಾಡಿದ ಚೀಟಿಯನ್ನು ಅಂಟಿಸಿ ಜಪ್ತಿ ಪಡಿಸಿಕೊಂಡ ಮು.ಮಾಲನ್ನು ಜಪ್ತಿ ಪಂಚನಾಮೆ, ಜ್ಞಾಪನ ಪತ್ರ ಮತ್ತು ಆರೋಪಿಯನ್ನು 7.45 ಗಂಟೆಗೆ ಠಾಣೆಯಲ್ಲಿ ಠಾಣಾಧಿಕಾರಿಯ ಮುಂದೆ ಮುಂದಿನ ಕ್ರಮಕ್ಕಾಗಿ ಹಾಜರುಪಡಿಸಿರುತ್ತೇನೆ.

ಸಾಕ್ಷಿಯು ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1 ಎಂದು ಗುರುತಿಸಲಾಯಿತು.  ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು ಗುರುತಿಸಲಾಯಿತು. ಜ್ಞಾಪನ ಪತ್ರವನ್ನು ನೋಡಿ ಗುರುತಿಸಿದು ಅದನ್ನು ನಿಪಿ. 2, ಸಾಕ್ಷಿಯ ಸಹಿಯನ್ನು ನಿಪಿ. 2 ಎ ಎಂದು ಗುರುತಿಸಲಾಯಿತು.  ಸಾಕ್ಷಿಯ 90 ಎಮ ಎಲ್‌ನ ಓರಿಜನಲ್ ಚಾಯಿಸ್ 96 ಪಾಕೆಟಗಳನ್ನು ನೋಡಿ ಗುರುತಿಸಿದ್ದು  ಅವುಗಳನ್ನು ಒಟ್ಟಾಗಿ ಮು.ಮಾ. 1 ಅಂತಾ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ಮು.ಮಾ. 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ರೂ. 240/- ಹಣವನ್ನು ಗುರುತಿಸಿದ್ದು ಅದನ್ನು ಮು.ಮಾ. 2 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ಶ್ರೀ. ಎಸ್ ಎಸ್ ಸಿ ವಕೀಲರಿಂದಃ**

ಆಳಂದದಿಂದ ಚೀಚೊಂಳಿ-ಬಿ ಗ್ರಾಮ ಅಂದಾಜು 15-20 ಕಿ.ಮಿ ಇರಬಹುದು. ನಾವು ಆಳಂದದಿಂದ ಸವಳೇಶ್ವರ, ಪಡಸವಳಿ, ನಿರಗುಡಿ ಮಾರ್ಗವಾಗಿ ಚೀಚೊಂಳಿ-ಬಿ ಗ್ರಾಮಕ್ಕೆ ಹೋಗಿರುತ್ತೇವೆ. ಬಾತ್ಮಿ ಬಂದಾಗ ನಾನು ಠಾಣೆಯಲ್ಲಿ ಇದ್ದೇನು. ಪಂಚರನ್ನು ನಾನೇ ದೂರವಾಣಿ ಕರೆ ಮಾಡಿ ಕರೆಸಿರುತ್ತೇನೆ. ಇಬ್ಬರು ಪಂಚರು ಖಜೂರಿಯವರು ಎಂದರೆ ಸರಿ. ಸದರಿ ಅವರು ಖಜೂರಿಯಿಂದ ಠಾಣೆಗೆ ಬರಲು ಎಷ್ಟು ಸಮಯ ಬೇಕಾಯಿತು ಎಂದರೆ ಸಾಕ್ಷಿಯ ನಾನು ಕರೆ ಮಾಡಿದಾಗ ಅವರು ಆಳಂದ ಮಾರುಕಟ್ಟೆಯಲ್ಲಿ ಇದ್ದರು ಅಂತಾ ನುಡಿಯುತ್ತಾರೆ. ಪಂಚನಾಮೆಯಲ್ಲಿ

ಚಾಸಾ 1 ಮತ್ತು 2 ರವರನ್ನು ದೂರವಾಣಿ ಮುಖಾಂತರ ಕರೆದಿರುತ್ತೇವೆ ಅಂತಾ ನಮೂದಿಸಿಲ್ಲ ಎಂದರೆ ಸರಿ. ನಾವು ದಾಳಿ ಮಾಡಲು ಕೆ ಎ 32/ಜಿ-1448 ಇರುತ್ತದೆ. ಸದರಿ ವಾಹನದಲ್ಲಿ 8 ಜನರು ಹೋಗಬಹುದು. ಘಟನಾ ಸ್ಥಳಕ್ಕೆ ಚೀಚೊಂಳಿ-ಬಿ ಗ್ರಾಮದ ಒಳಗೆ ಹೋಗಬೇಕು ಎಂದರೆ ಸರಿ. ನಾವು ವಾಹನವನ್ನು ಘಟನಾ ಸ್ಥಳದಿಂದ 50 ರಿಂದ 100 ಅಡಿ ಅಂತರದಲ್ಲಿ ನಿಲ್ಲಿಸಿದ್ದೇವು. ಜಪ್ತಿ ಪಡಿಸಿದ ಸ್ದಳದ ಪಂಚನಾಮೆಯನ್ನು ಹೇಳಲು ನನಗೆ ನೆನಪು ಇರುವುದಿಲ್ಲ. ಘಟನಾ ಸ್ಥಳದಲ್ಲಿ ಜನರು ಇದ್ದರು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಒಟ್ಟು 3-4 ಜನರು ಇದ್ದರು. ಸಾ. 6.00 ಗಂಟೆಗೆ ನಿರುಗುಡಿ ಗ್ರಾಮದಿಂದ ಜನರು ಅವರ ಹೋಲದಿಂದ ಘಟನಾ ಸ್ಥಳದ ಮೂಲಕ ಹೋಗುತ್ತಾರೆ ಎಂದರೆ ಸರಿ. ಸದರಿ ರೈತರ ಹೇಳಿಕೆಯನ್ನು ನಾನು ಪಡೆದಿರುವುದಿಲ್ಲ. ಮು.ಮಾ.1 ರ ತರಹ ಸಾಮಾನ್ಯವಾಗಿ ಎಲ್ಲಾ ಮದ್ಯ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸಾಕ್ಷಿಯು ಸಿಗಬಹುದು ಅಂತಾ ನುಡಿಯುತ್ತಾರೆ. ರೂ. 240/- ಮುಖ ಬೆಲೆ ಎಂದರೆ ರೂ. 200/- ಒಂದು ನೋಟು, ರೂ. 20/- ಎರಡು ನೋಟು ಅಂತಾ ನುಡಿಯುತ್ತಾರೆ. ಜಪ್ತಿ ಪಂಚನಾಮೆಯನ್ನು ನಾವು ಘಟನಾ ಸ್ಥಳದಲ್ಲಿ ಲ್ಯಾಪಟಾಪ ಮುಖಾಂತರ ಗಣಕೀಕೃತ ಮಾಡಿರುತ್ತೇವೆ ಅದನ್ನು ಅಲ್ಲೆ ಪ್ರೀಂಟ್ ತೆಗೆದಿರುತ್ತೇವೆ, ಸಾಕ್ಷಿಯು ಮುಂದುವರೆದು ಪಕ್ಕದ ಮನೆಯಲ್ಲಿನ ವಿದ್ಯುತ್ ಸಂಪರ್ಕ ಪಡೆದು ಪ್ರೀಂಟ್ ತೆಗೆದಿರುತ್ತೇವೆ, ಆದರೆ ಸದರಿ ಅವರ ಹೇಳಿಕೆಯನ್ನು ಪಡೆದಿರುವುದಿಲ್ಲ. ಘಟನಾ ಸ್ಥಳದ ಅಕ್ಕಪಕ್ಕದಲ್ಲಿ ಸುಮಾರು ಮನೆಗಳು ಇರುತ್ತವೆ ಆದರೆ ಸಂಖ್ಯೆ ಹೇಳಲು ಬರುವುದಿಲ್ಲ. ಘಟನಾ ಸ್ಥಳದಲ್ಲಿ 10 ಅಡಿ ರಸ್ತೆ ಇದ್ದು ಅಕ್ಕಪಕ್ಕದಲ್ಲಿ ನಾಲೆಗಳು ಇರುತ್ತವೆ ಎಂದರೆ ಸಾಕ್ಷಿಯು ಈಗ ಇರಬಹುದು, ಆಗ ಇರಲಿಲ್ಲಅಂತಾ ನುಡಿಯುತ್ತಾರೆ. ಘಟನಾ ಸ್ಥಳದ ಮುಂದೆ ಇರುವ ರಸ್ತೆಯು ಸುಮಾರು 3-4 ಕಿ.ಮೀ ನಷ್ಟು ನೆರವಾದ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ತಿರುವು ಇರುತ್ತದೆ ಅಂತಾ ನುಡಿಯುತ್ತಾರೆ. ನಾನು ಆರೋಪಿ ಕಡೆಯಿಂದ ರಟ್ಟಿನ ಡಬ್ಬಿಯನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ. ದಾಳಿ ಮಾಡುವುದಕ್ಕಿಂತ ಮುಂಚೆ ಸಮ್ಮುಚಿತ ವರದಿಯನ್ನು ತಯಾರಿಸಿರುವುದಿಲ್ಲ. ನನಗೆ ಯಾವುದೇ ಬಾತ್ಮಿ ಬಂದಿರುವುದಿಲ್ಲ, ಮತ್ತು ನಾನು ಘಟನಾ ಸ್ಥಳಕ್ಕೆ ನನ್ನ ಸಿಬ್ಬಂದಿ ಮತ್ತು ಪಂಚರ ಜೊತೆಗೆ ವಾಹನದಲ್ಲಿ ಹೋಗಿರುವುದಿಲ್ಲ ಮತ್ತು ಎಲ್ಲರ ಸಮಕ್ಷಮದಲ್ಲಿ

ದಾಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾಲು ಮತ್ತು ಆರೋಪಿಗೆ ಯಾವುದೇ ಸಂಬಂದ ಇಲ್ಲದೇ ಇದ್ದರೂ ಠಾಣೆ ಅಂಕೆ-ಸಂಖ್ಯೆ ಹೆಚ್ಚಿಸಲು ಆರೋಪಿಯ ವಿರುದ್ದ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ